# ವಿಚಾರಪ್ರಭ

## ವಿಶ್ವಧರ್ಮಗಳ ಪ್ರಕಾರ ದೇವರು, ಜೀವಿ, ಜಗತ್ತು ಮತ್ತು ಆಧ್ಯಾತ್ಮಿಕ ಸಾಧನೆ

## ಕ್ರೈಸ್ತ ಧರ್ಮ

*ವಂದನೀಯ ಡಾ. ವಿಜಯಕುಮಾರ್, OCD*

**ದೇ**ವರು, ಮಾನವ, ಜಗತ್ತು ಹಾಗೂ ಆಧ್ಯಾತ್ಮಿಕತೆಯ ಬಗೆಗಿನ ಕ್ರೈಸ್ತ ನಂಬಿಕೆ, ಜ್ಞಾನ ಹಾಗೂ ತತ್ವಗಳಿಗೆ ಸತ್ಯವೇದ ಬೈಬಲಿನ ದಿವ್ಯ ಪ್ರಕಟಣೆಯೇ (Revelation) ಮೂಲ ಆಕರ ಹಾಗೂ ಸುಭದ್ರ ಬುನಾದಿಯಾಗಿದೆ. ಬೈಬಲಿನ ಎರಡು ಪ್ರಮುಖ ಭಾಗಗಳಾದ ಹಳೆಯ ಹಾಗೂ ಹೊಸ ಒಡಂಬಡಿಕೆಗಳಲ್ಲಿ, ಹಳೆಯ ಒಡಂಬಡಿಕೆಯನ್ನು ಯಹೂದ್ಯರು ಒಪ್ಪಿಕೊಳ್ಳುತ್ತಾರೆ. ಪ್ರಭು ಯೇಸುಕ್ರಿಸ್ತರೇ ಮಾನವ ಜೀವಿತದ ಗುರಿ ಮತ್ತು ಉದ್ದೇಶವಾಗಿದ್ದಾರೆ; ಅವರು ಹೊಸ ಒಡಂಬಡಿಕೆಯ ಸ್ಥಾಪಕರು ಮತ್ತು ಹಳೆಯ ಒಡಂಬಡಿಕೆಯ ಪ್ರಾಚೀನ ಭವಿಷ್ಯವಾಣಿಗಳನ್ನು ನಿಜಗೊಳಿಸಲು ಅವತಾರವೆತ್ತಿದವರು ಎಂಬ ಸತ್ಯವನ್ನು ಕ್ರೈಸ್ತ ಆಧ್ಯಾತ್ಮಿಕತೆ ನಂಬುತ್ತದೆ. ದೇವರು ಇಂತಹ ಪ್ರಕಟಣೆಯ ಮೂಲಕ ಮತ್ತು ಪ್ರಮುಖವಾಗಿ ಪರಿಗಣಿಸಲ್ಪಡುವ ಪಿತಾಮಹ ಅಬ್ರಹಾಮ, ಇಸಾಕ, ಯಾಕೋಬ ಮತ್ತು ಪ್ರವಾದಿಗಳಾದ ಮೋಶೆ, ದಾವೀದ, ಎಲೀಯ, ಯೆರೇಮಿಯಾ, ಎಜೆರೇಯ ಹಾಗೂ ಇನ್ನಿತರರ ಮುಖಾಂತರ ತಮ್ಮನ್ನೇ ತೋರ್ಪಡಿಸಿಕೊಂಡರು. ಕೊನೆಗೆ ಮನುಜಾವತಾರವಾದ ತಮ್ಮ ಏಕಮಾತ್ರ ಪುತ್ರ ಯೇಸುಕ್ರಿಸ್ತರ ಮೂಲಕ, ಮಾನವ ರಕ್ಷಣಾಯೋಜನೆಯಲ್ಲಿ ಮೇಲಿನ ತಮ್ಮ ಪ್ರಕಟಣೆಯನ್ನು ಪರಿಪಕ್ವವಾದ ಈ ಪ್ರಸ್ತುತ ಕಾಲದಲ್ಲಿ ಪರಿಪೂರ್ಣಗೊಳಿಸಿದ್ದಾರೆ. ಆ ಮೂಲಕ ನಾವೆಲ್ಲರೂ ಮುಂದಿನ ಶಾಶ್ವತ ಮಹಿಮಾ ಜೀವನದಲ್ಲಿ, ಅವರನ್ನು ಮುಖಾಮುಖಿ ಕಾಣುವ ಭಾಗ್ಯವನ್ನು ದಯಪಾಲಿಸಿದ್ದಾರೆ. (cf.ರೋಮನ್ನರಿಗೆ, ೧೬:೨೫–೨೬; ೧ ಕೊರಿಂಥ, ೧೩:೧೨)

### ದೇವರು

ದೇವರೇ ಸಮಸ್ತವನ್ನು ಸೃಷ್ಟಿಸಿದ ಸೃಷ್ಟಿಕರ್ತ. ಅವರು ಸೃಷ್ಟಿಸಿದ ಎಲ್ಲವೂ ಬಹಳ ಒಳ್ಳೆಯದು. ದೇವರು ಸರ್ವೇಶ್ವರ, ಸರ್ವವ್ಯಾಪಿ, ಆತ್ಮಸ್ವರೂಪಿ, ಸರ್ವಜ್ಞಾನಿ, ಸರ್ವಶಕ್ತ, ಅವರೇ ಎಲ್ಲದರ ಆದಿ ಹಾಗೂ ಅಂತ್ಯವೂ ಮತ್ತು ಕರುಣಾಮಯಿಯೂ ಆಗಿದ್ದಾರೆ.

ದೇವರು ಒಬ್ಬರೇ ಆದರೂ ಅವರು ಪವಿತ್ರತ್ರಯರಾಗಿ (Holy Trinity) ವ್ಯಕ್ತರಾಗಿದ್ದಾರೆ. ಅವೆಂದರೆ, ಪ್ರಭುಕ್ರಿಸ್ತರೇ ಹೇಳಿದಂತೆ **ಪಿತ, ಸುತ ಮತ್ತು ಪವಿತ್ರಾತ್ಮರು.** ಅವರು ಮೂರು ರೂಪಗಳಾದರೂ ಮೂವರೂ ಪ್ರತ್ಯೇಕ ದೇವರುಗಳಲ್ಲ. ಇರುವುದು ಒಬ್ಬರೇ ಸರ್ವಶಕ್ತ ದೇವರು. ಈ ಮೂವರ *ಬುದ್ಧಿ, ಜ್ಞಾನ, ದೈವಸ್ವಭಾವ* – ಇವು ಒಂದೇ ಆಗಿರುವುದರಿಂದ ಈ ಮೂವರೂ ದೇವರ ಪ್ರತಿರೂಪಗಳೆನಿಸಿಕೊಳ್ಳುತ್ತಾರೆ. ಇದೇ ಪವಿತ್ರತ್ರಯರ ಪರಮರಹಸ್ಯ.

### ಮಾನವ

ಸರ್ವೇಶ್ವರನಾದ ದೇವರು ಮನುಷ್ಯನನ್ನು ಸ್ತ್ರೀಪುರುಷರ ರೂಪದಲ್ಲಿ ಸೃಷ್ಟಿಸಿದರು. ಅವರಿಗೆ ತಮ್ಮನ್ನು ಹೋಲುವ ಸ್ವರೂಪವನ್ನು ಕರುಣಿಸಿ ಈ ಭೌತಿಕ ಜಗತ್ತಿನ ಒಡೆಯರನ್ನಾಗಿ ಮಾಡಿದರು. ಮಾನವನು ತನ್ನ ದೇಹದ ಮೇಲೆ ಮಾತ್ರವಲ್ಲ, ಸಮಸ್ತ ಸೃಷ್ಟಿಯ ಮೇಲೆಯೂ ಪ್ರಭುತ್ವವನ್ನು ಸಾಧಿಸುವ ಶಕ್ತಿಯನ್ನು ಪಡೆದಿದ್ದನು. ಹಾಗೆಯೇ ಮಾನವ ಕುಲದ ಆದಿ ತಂದೆ–ತಾಯಿಯರಾದ ಆದಾಮ ಮತ್ತು ಈವೆಯರನ್ನು (Adam and Eve) ದೇವರು ಪರೀಕ್ಷೆಗೆ ಒಳಪಡಿಸಿದರು. ಅವರನ್ನು ಪ್ರಲೋಭನಗೊಳಿಸಲು ಸೈತಾನನನ್ನು ಬಿಡಲಾಗಿತ್ತು. ಆದಾಮ ಈವೆಯವರು ಸೈತಾನನನ್ನು ನಂಬಿ, ದೇವರಿಗೆ ಅವಿಧೇಯರಾದರು. ನಿಷೇಧಿಸಿದ್ದ ಹಣ್ಣನ್ನು ತಿಂದು ಪಾಪವನ್ನು ಕಟ್ಟಿಕೊಂಡು, ದೇವರ ಪರೀಕ್ಷೆಯಲ್ಲಿ ಬಹಳ ಹೀನಾಯವಾಗಿ ಸೋತು ಹೋದರು. ಹೀಗೆ ಅವರು ಸೈತಾನನಲ್ಲಿ ವಿಶ್ವಾಸ ಮತ್ತು ನಂಬಿಕೆಗಳನ್ನು ಇರಿಸಿದ್ದರ ಫಲವಾಗಿ ನಾನಾ ತೆರನಾದ ದುಷ್ಪರಿಣಾಮಗಳಿಗೆ ಬಲಿಯಾದರು. ಅವುಗಳಲ್ಲಿ ಕೆಲವು ಈ ಕೆಳಗಿನಂತಿವೆ:

೧. ಆದಾಮ–ಈವೆಯವರು ಸರ್ವೇಶ್ವರನಾದ ದೇವರಿಂದ ತ್ಯಜಿಸಲ್ಪಟ್ಟವರೂ ದೂರೀಕರಿಸಲ್ಪಟ್ಟವರೂ ಹಾಗೂ ಧಿಕ್ಕರಿಸಲ್ಪಟ್ಟವರೂ ಆದರು.

೨. ಆದಾಮ–ಈವೆಯವರ ದೇಹ ಮತ್ತು ಆತ್ಮಗಳ ಮಧ್ಯೆ ಆಂತರಿಕ ವಿಭಜನೆ ಅಥವಾ ಒಡಕು ಏರ್ಪಟ್ಟು, ಆಧ್ಯಾತ್ಮಿಕ ಖಿನ್ನತೆ ಉಂಟಾಗಿ, ಅವರು ಮನೋರೋಗಿಗಳಂತಾದರು (Spiritual Schizophrenia)

೩. ಆದಾಮ ಮತ್ತು ಈವೆಯರ ಮಧ್ಯೆ ಕ್ರೋಧ, ಮದ, ಮಾತ್ಸರ್ಯ ಅಪನಂಬಿಕೆಗಳಂತಹ ವಿಷಬೀಜಗಳು ಬಿತ್ತಲ್ಪಟ್ಟು, ಪ್ರೀತಿ, ವಿಶ್ವಾಸ, ನಂಬಿಕೆಗಳು ಕಡಿಮೆಯಾದವು. ಕೊನೆಗೆ ಅವರ ಮಕ್ಕಳೂ ಸಹ ಪರಸ್ಪರ ಮಾತ್ಸರ್ಯ ಮತ್ತು ಮದಗಳಿಂದ ಒಬ್ಬರಿಗೊಬ್ಬರು ದ್ವೇಷಿಸಲಾರಂಭಿಸಿ, ಕೊಲೆಗಡುಕರಾಗುವಷ್ಟು ಅವನತಿಗೆ ಒಳಗಾದರು.

೪. ಈ ಭೂಮಿ, ಪ್ರಕೃತಿ, ಅವುಗಳಲ್ಲಿರುವ ಸಕಲ ಜೀವರಾಶಿಗಳು– ಎಲ್ಲವೂ ಮಾನವನಿಗೆ ವಿರೋಧವಾದವು. ನಾನಾ ತರಹದ ರೋಗ–ರುಜಿನಗಳು, ಪಿಡುಗುಗಳು, ಬಡತನ, ಸಾವು–ನೋವುಗಳು, ಭೂಕಂಪ, ಜಲಪ್ರಳಯ, ಚಂಡಮಾರುತ, ಯುದ್ಧ, ಕಲಹ, ಕ್ರಾಂತಿಗಳು ಹೆಚ್ಚಿ ರಕ್ತದೋಕುಳಿ ಹರಿಯಿತು. ಇವಕ್ಕೆಲ್ಲ ಆದಿ ತಂದೆತಾಯಿಯವರ ಅವಿಧೇಯತೆಯ ಘೋರ ಪಾಪಕೃತ್ಯವೇ ನಾಂದಿಯಾಯಿತು.

### ಜಗತ್ತು

ಸರ್ವಶಕ್ತ ದೇವರಿಂದ ಸೃಷ್ಟಿ ಮಾಡಲ್ಪಟ್ಟ ಈ ಜಗತ್ತು ಒಳ್ಳೆಯದು ಮತ್ತು ಕೆಟ್ಟದ್ದು ಎರಡೂ ಆಗಿದೆ. ಒಂದೆಡೆ ನಾವು ಒಳ್ಳೆಯದನ್ನು ನೋಡುತ್ತೇವೆ; ಇನ್ನೊಂದೆಡೆ ಸೈತಾನನ ಪ್ರಭಾವಕ್ಕೆ ಒಳಗಾಗಿ ಕೆಟ್ಟದ್ದಾಗಿರುವುದನ್ನು ನೋಡುತ್ತೇವೆ. ಆದಾಮನ ಮತ್ತು ಆತನ ಸಂತತಿಯ ಪಾಪಕೃತ್ಯಗಳೇ ಇದಕ್ಕೆ ಕಾರಣ. ಹೀಗೆ, ಜಗತ್ತು ಒಳ್ಳೆಯದು ಹಾಗೂ ಕೆಟ್ಟದ್ದರ ಸಂಗಮವಾಗಿದ್ದು, ಅವೆರಡೂ ಇಲ್ಲಿ ಸರಿಸಮವಾಗಿ ಇರುವುದನ್ನು ನೋಡಬಹುದು. ಹಲವು ಸಲ, ಒಳ್ಳೆಯದು ಕೆಟ್ಟದರಂತೆಯೂ, ಕೆಟ್ಟದು ಒಳ್ಳೆಯದರಂತೆಯೂ ಕಾಣುತ್ತದೆ; ಅಸತ್ಯ

ಸತ್ಯವಂತೆ ಗೋಚರಿಸುತ್ತದೆ. ಸೈತಾನನು ತನ್ನ ವಿಷಕೊಂಡಿಯಿಂದ ಈವೆಯ ಮನಸ್ಸನ್ನು ಕಳಮಿದ್ದರಿಂದ, ಮಾನವ ಜನಾಂಗದ ಸಂಸ್ಕೃತಿ, ಆಚಾರವಿಚಾರಗಳು, ಆಗುಹೋಗುಗಳು, ಸಂಪ್ರದಾಯ, ಭಾಷೆ, ದೇಶ, ಕುಲ, ಗೋತ್ರಗಳು ಇವೆಲ್ಲವೂ ಪ್ರಭಾವಿತವಾಗಿ ಬಹಳಷ್ಟು ಕಲುಷಿತಗೊಂಡಿವೆ.

ಶೇಕ್ಸ್‌ಪಿಯರ್ ಪ್ರತಿಪಾದಿಸುವಂತೆ, ಈ ಜಗತ್ತು ಒಂದು ನಾಟಕ ಶಾಲೆ ಹಾಗೂ ಎಲ್ಲ ಸ್ತ್ರೀಪುರುಷರೂ ಇಲ್ಲಿ ಪಾತ್ರಧಾರಿಗಳು. ನಾಟಕ ಶಾಲೆಯಂತಿರುವ ಈ ಜಗತ್ತು, 'ಬೆಳಕಿನ ಮಕ್ಕಳು (Children of Light)' ಮತ್ತೆ 'ಕತ್ತಲ ಲೋಕದ ದುಷ್ಟಶಕ್ತಿಗಳು (Children of Darkness)' – ಇವುಗಳ ನಡುವೆ ನಡೆಯುತ್ತಿರುವ ಸಮರದ ಕುರುಕ್ಷೇತ್ರವಾಗಿದೆ.

ಸೈತಾನನನ್ನು ಶಪಿಸಿದ ದೇವರು, ಈ ಲೋಕವನ್ನು ರಕ್ಷಿಸುವ ಸಲುವಾಗಿ, ಮಾನವ ಜನಾಂಗದ ಆದಿ ತಂದೆತಾಯಿಯರಿಗೆ, ಮೆಸ್ಸಿಯ ಅಥವಾ ರಕ್ಷಕನ ಬರುವಿಕೆಯ ಬಗ್ಗೆ ಪರೋಕ್ಷವಾಗಿ ಮುಂಚೆಯೇ ತಿಳಿಸಿದರು. ಮುಂಚಿತವಾಗಿ ವಾಗ್ದಾನ ಮಾಡಿದಂತೆ, ದೇವರು ಅಬ್ರಹಾಮರನ್ನೂ, ಇಸ್ರಾಯೆಲ್ ಜನಾಂಗವನ್ನೂ ಆರಿಸಿಕೊಂಡರು. ಹಾಗೆಂದು, ಇನ್ನುಳಿದ ಮಾನವ ಜನಾಂಗವನ್ನು ಸಂಪೂರ್ಣವಾಗಿ ದೇವರು ಮರೆತುಬಿಟ್ಟರೆಂದು ಇದರರ್ಥವಲ್ಲ. ಅವರ ಕರುಣೆ ಎಷ್ಟಿತ್ತು ಎಂದರೆ, ಕೋಪ ಮತ್ತು ಅಸೂಯೆಗಳಿಂದ ತನ್ನ ಸ್ವಂತ ತಮ್ಮನನ್ನೇ ಕೊಂದ 'ಕಾಯಿನ' ಎಂಬುವವನಿಗೆ ಎಚ್ಚರಿಕೆ ಕೊಟ್ಟು, ಅವನ ಬದುಕಿನಲ್ಲಿ ಜ್ಯೋತಿಯನ್ನು ಬೆಳಗಿಸಿದರು.

ಹೀಗೆ ದೇವರು ತಮ್ಮ ಅನುಗ್ರಹ ಕಾರ್ಯವನ್ನು ಮುಂದುವರೆಸುತ್ತ, ಅಜ್ಞಾನದ ಕತ್ತಲಿನಲ್ಲಿ ಮುಳುಗಿರುವ ಈ ಜಗತ್ತಿನಲ್ಲಿ ಜ್ಯೋತಿಃಪುಂಜ ಗಳಂತೆ ಪ್ರಕಾಶಿಸುತ್ತಿರುವ ಹಲವಾರು ಮಹಾನ್ ಸ್ತ್ರೀಪುರುಷರನ್ನು ಉದ್ಧರಿಸಿ, ಅವರ ಮೂಲಕ ಮಾನವ ಜನಾಂಗಕ್ಕೆ ಜ್ಞಾನೋದಯ ವಾಗುವಂತೆ ಮಾಡಿದರು (Enlightenment). ಗ್ರೀಕ್ ಕ್ರೈಸ್ತ ಧರ್ಮ ಸಭೆಯ (Greek Orthodox Church) ಪೂಜ್ಯ ಸಂನ್ಯಾಸಿಗಳು ತತ್ತ್ವಜ್ಞಾನಿಗಳಾದ ಸಾಕ್ರಟಿಸ್ ಮತ್ತು ಪ್ಲೇಟೋ ಅವರನ್ನು ಮತ್ತು ನೈಋತ್ಯ ದಿಕ್ಕಿನ ಜನ ಮತ್ತು ಭಾರತೀಯರು, ಗೌತಮ ಬುದ್ಧ, ಕನ್‌ಫ್ಯೂಶಿಯಸ್ ಮುಂತಾದ ಮಹಾತ್ಮರನ್ನು ಅಂತಹ 'ಜ್ಯೋತಿ ಪುರುಷ' ರೆಂದು ಪರಿಗಣಿಸುತ್ತಾರೆ.

ಸಂತ ಯೊವಾನ್ನರು ತಮ್ಮ ಸಂದೇಶದಲ್ಲಿ ಹೀಗೆ ಹೇಳುತ್ತಾರೆ: "ಜಗತ್ತು ಉಂಟಾಗುವ ಮುಂಚೆಯೆ ದಿವ್ಯವಾಣಿ ಇದ್ದಿತು; ದೇವರು ದಿವ್ಯವಾಣಿಯ ರೂಪದಲ್ಲಿ ಇದ್ದರು. ಆ ದಿವ್ಯವಾಣಿ ದೇವರ ಸಹಚರ ನಾಗಿದ್ದಿತು ಹಾಗೂ ಅದು ಜೀವಂತವಾಗಿತ್ತು. ಆ ದಿವ್ಯವಾಣಿಯೇ ಮಾನವಜನಾಂಗದ ಜ್ಯೋತಿ. ಆ ಜ್ಯೋತಿ ಕತ್ತಲಲ್ಲೂ ಪ್ರಕಾಶಿಸುತ್ತದೆ. ಕತ್ತಲಿಗೂ ಅದನ್ನು ನಿಗ್ರಹಿಸಲು ಸಾಧ್ಯವಾಗಲಿಲ್ಲ. ನೈಜ ಜ್ಯೋತಿಯಾದ ಆ ದಿವ್ಯವಾಣಿಯೇ ಏಸುಕ್ರಿಸ್ತ. ಮಾನವರೆಲ್ಲರನ್ನೂ ಬೆಳಗಿಸಲು ಲೋಕಕ್ಕೆ ಆಗಮಿಸಿದ ಜಗಜ್ಜ್ಯೋತಿಯೇ ಅವರು."

## ಆಧ್ಯಾತ್ಮಿಕ ಸಾಧನೆ

ಯೇಸುಕ್ರಿಸ್ತರನ್ನು ಯಾರು ಮನಸಾ ಸ್ವೀಕರಿಸುತ್ತಾರೋ ಅಥವಾ ಅವರನ್ನು ತಮ್ಮೆಡೆಗೆ ಬರಮಾಡಿಕೊಳ್ಳುತ್ತಾರೋ ಅಂಥವರಿಗೆ, ಅಂದರೆ ಅವರಲ್ಲಿ ವಿಶ್ವಾಸವಿಟ್ಟವರಿಗೆ, ದೇವರ ಮಕ್ಕಳಾಗುವ ಹಕ್ಕನ್ನು ಏಸುಕ್ರಿಸ್ತರು ಕೊಟ್ಟರು. ಏಸುಕ್ರಿಸ್ತರ ಜನನವು ರಕ್ತಸಂಬಂಧದಿಂದ ಆದುದಲ್ಲ, ದೇವರ ವರಪ್ರಸಾದದಿಂದಲೇ ಆದುದು. ಅವರ ಪರಿಪೂರ್ಣತೆಯ ದೆಸೆಯಿಂದಲೇ, ನಾವೆಲ್ಲರೂ ಅವರಿಂದ, ವರಗಳ ಮೇಲೆ ವರಗಳನ್ನು ಪಡೆದಿದ್ದೇವೆ. ದೇವರ ಈ ಬಗೆಯ ವರಪ್ರಸಾದ ಮತ್ತು ಸತ್ಯತೆಯು ಏಸುಕ್ರಿಸ್ತನಿಂದಲೇ ಹರಿದುಬಂದಿವೆ. ಯಾರೂ ಎಂದೂ ದೇವರನ್ನು ಕಂಡಿಲ್ಲ; ತಂದೆಯಾದ ದೇವರ ಹೃದಯಸ್ಥಾನದಲ್ಲಿರುವ ಅವರ ಏಕೈಕ ಪುತ್ರನೇ (ಏಸುಕ್ರಿಸ್ತನೇ) ಅವರ ಬಗ್ಗೆ ಈ ಜಗತ್ತಿಗೆ ತಿಳಿಯಪಡಿಸಿದ್ದಾರೆ." (ಯೊವನ್ನ, ೧:೧೨–೩;೧೬, ೧೭–೧೮)

ಮನುಷ್ಯಾವತಾರದ ಮೂಲಕ ನಮ್ಮೆಡೆಗೆ ಬಂದು, ಈ ಭುವಿಯಲ್ಲಿ ಜನಿಸಿ, ನಮ್ಮಗಳ ನೆಲೆಯಾಗಿರುವ ದೇವರ ಪುತ್ರನಾದ ಪ್ರಭು ಏಸುಕ್ರಿಸ್ತರ ಮೇಲಿನ ವಿಶ್ವಾಸದ ಮೇಲೆಯೇ ಕ್ರೈಸ್ತ ಆಧ್ಯಾತ್ಮಿಕತೆಯು ಆಳವಾಗಿ ಬೇರೂರಿದೆ. ಒಬ್ಬನು ಮೊದಲು ಕ್ರಿಸ್ತನ ಮೇಲೆ ವಿಶ್ವಾಸವಿಟ್ಟು, ಅವನನ್ನು ಮನಃಪೂರ್ವಕವಾಗಿ ಅಂಗೀಕರಿಸುವ ತನ್ನ ಬಯಕೆಯನ್ನು 'ದೀಕ್ಷಾಸ್ನಾನ'ವನ್ನು (baptism) ಸ್ವೀಕರಿಸುವುದರ ಮೂಲಕ ತೋರ್ಪಡಿಸುತ್ತಾನೆ. ಈ ಸಂಸ್ಕಾರವು ಆಧ್ಯಾತ್ಮಿಕ ಜೀವನದ ಮೊದಲ ಹೆಜ್ಜೆಯಾಗಿದೆ. ಅದು, ಅಂತಹ ವಿಶ್ವಾಸಿಯು ಯೇಸುಕ್ರಿಸ್ತರಲ್ಲಿ ಐಕ್ಯವಾಗುವಂತೆಯೂ ಮತ್ತು ಅವನ ಸ್ವರೂಪದಲ್ಲಿ ಸಹಭಾಗಿಯೆಂದು ಭಾವಿಸುವಂತೆಯೂ ಮಾಡುತ್ತದೆ. ಆದಿ ತಂದೆತಾಯಿಗಳ ಪಾಪವನ್ನು ಪವಿತ್ರಾತ್ಮರ ವರಪ್ರಸಾದದ ಶಕ್ತಿಯಿಂದ ನೀಗಿಸಲು ಈ ಸಂಸ್ಕಾರ ಸಹಾಯಕವಾಗಿದ್ದು, ಅದು ಭಕ್ತನ ವಿಶ್ವಾಸವನ್ನು ದೃಢಪಡಿಸುತ್ತದೆ.

ಸಂತ ಪೌಲರು ಹೀಗೆ ನುಡಿಯುತ್ತಾರೆ: "ಏಸುಕ್ರಿಸ್ತರು ನಮ್ಮನ್ನು ಪ್ರೀತಿಸುತ್ತ, ನಮಗೋಸ್ಕರವಾಗಿ ತಮ್ಮನ್ನೇ ಸಮರ್ಪಿಸಿಕೊಂಡರು. ತಮ್ಮನ್ನೇ ಅವರು ದೇವರಿಗೆ ಸುಗಂಧಕಾಣಿಕೆಯಾಗಿ, ಬಲಿಯಾಗಿ ಅರ್ಪಿಸಿಕೊಂಡರು. ಅಂತೆಯೇ ನೀವೂ ಕೂಡ (ದೇವರ ಮೇಲಿನ) ಪ್ರೀತಿಯನ್ನು ಪಡೆದು ಬಾಳಿರಿ" (ಎಫೆಸ್ ೫:೨). ಹೀಗೆ, ಒಬ್ಬ ಭಕ್ತನು ಯೇಸುಕ್ರಿಸ್ತನನ್ನು ಅಂಗೀಕರಿಸಿ, ಅವರ ಸಂದೇಶವನ್ನು ತನ್ನದನ್ನಾಗಿ ಮಾಡಿಕೊಳ್ಳುವುದಕ್ಕೆ ಪವಿತ್ರಾತ್ಮರು ಪ್ರೇರೇಪಿಸುತ್ತಾರೆ. ಆದ್ದರಿಂದ, ಕ್ರೈಸ್ತ ಆಧ್ಯಾತ್ಮಿಕ ಸಾಧನೆಯೆನ್ನುವುದು ಯೇಸುಕ್ರಿಸ್ತರೇ ಮಾನವತೆಗೆ ಪ್ರದಾನ ಮಾಡಿದ್ದು ಹಾಗೂ ಆ ದೇವರ ಶಕ್ತಿಯಿಂದಲೇ ಕಾರ್ಯಗತವಾಗುವುದು. ಅದಲ್ಲದೆ ಭಕ್ತನ ಪಾಲೂ ಇದರಲ್ಲಿ ಅವಶ್ಯವಾದುದು. ತಮ್ಮ ಭಕ್ತನು ತಮ್ಮಲ್ಲಿ ವಿಶ್ವಾಸ, ನಂಬಿಕೆ, ಪ್ರೀತಿಗಳೆಂಬ ದೈವೀ ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂದು ಏಸುಕ್ರಿಸ್ತರು ಬಯಸುತ್ತಾರೆ. ಮಾನವನು ತನ್ನ ಆಚಾರ–ವಿಚಾರ ಮತ್ತು ನಡವಳಿಕೆಗಳಲ್ಲಿ ನೈತಿಕ ಮೌಲ್ಯಗಳಾದ ನ್ಯಾಯ, ನೀತಿ, ಸತ್ಯ, ಅಹಿಂಸೆ, ಪ್ರೀತಿ ಇತ್ಯಾದಿಗಳನ್ನು ಬೆಳೆಸಿಕೊಂಡರೂ ಸಾಕು. ಅವುಗಳ ಮೂಲಕವೂ ಯಾವ ಭೇದಭಾವವಿಲ್ಲದೆ, ಯಾರು ಬೇಕಾದರೂ, ಆಧ್ಯಾತ್ಮಿಕ ಅನುಭವದ ಉತ್ತುಂಗ ಶಿಖರಕ್ಕೆ ಏರಬಹುದು. ಏಕೆಂದರೆ ಅವು ಏಸುಕ್ರಿಸ್ತರು ಹೇಳುವ ದೈವೀ ನಡತೆಗಳಿಗಿಂತ ಅಭಿನ್ನವಾಗಿವೆ.

ಕ್ರೈಸ್ತ ಆಧ್ಯಾತ್ಮಿಕ ಸಾಧನೆಯ ಇನ್ನೊಂದು ಪ್ರಮುಖ ಸಂಸ್ಕಾರವೆಂದರೆ **'ಪಶ್ಚಾತ್ತಾಪದ ಸಂಸ್ಕಾರ'**. ಎಂತಹ ಆಧ್ಯಾತ್ಮಿಕ ನಿಪುಣರಾದರೂ ಸರಿಯೇ, ದಿನಕ್ಕೆ ಹಲವು ಬಾರಿಯಾದರೂ ಸಣ್ಣಪುಟ್ಟ ಪಾಪಗಳನ್ನಾದರೂ ಮಾಡಿ, ಎಡವುತ್ತಾರೆ. ಈ ಬಗೆಯ ಆಧ್ಯಾತ್ಮಿಕ ರೋಗಗಳು, ದೈಹಿಕ ಮತ್ತು ಮಾನಸಿಕ ರೋಗಗಳಂತೆ ಒಬ್ಬನ ಜೀವಿತದ ಅವಿಭಾಜ್ಯ ಅಂಗಗಳಾಗಿವೆ. ಪಾಪ ಮಾಡುವ ಪ್ರತಿ

ಯೊಬ್ಬನೂ ಒಂದು ಕ್ಷಣಕ್ಕಾದರೂ ತನ್ನ ವಿಶ್ವಾಸವನ್ನು ಕಳೆದುಕೊಳ್ಳುವ ಸಾಧ್ಯತೆ ಇದೆ. ದೊಡ್ಡ ಪಾಪಗಳನ್ನು ಮಾಡುವವರು ತಮ್ಮ ವಿಶ್ವಾಸವನ್ನು ಸರ್ವಥಾ ಕಳೆದುಕೊಳ್ಳುವರು. ಇಷ್ಟಾದರೂ, ಪ್ರಭು ಏಸುಕ್ರಿಸ್ತರು ತಮ್ಮ ಅಪಾರ ಕರುಣೆಯಿಂದ (Infinite Goodness), ಯಾರು ಪಶ್ಚಾತ್ತಾಪಪಡುತ್ತಾರೋ, ಯಾರು ತಮ್ಮ ಪಾಪಗಳಿಂದ ವಿಮೋಚನೆಯನ್ನು ಬಯಸುತ್ತಾರೋ, ಅವರೆಲ್ಲರಿಗೂ ಕ್ಷಮಾದಾನ ನೀಡುತ್ತಾರೆ. ಹೀಗೆ ಯೇಸುಕ್ರಿಸ್ತರ ಅನುಗ್ರಹದಿಂದ 'ಹೊಸ ಜನ್ಮ' ಪಡೆದ ನವ ಮಾನವರು ಒಟ್ಟುಗೂಡಿದಾಗ, 'ಧರ್ಮಸಭೆ' (Church) ರೂಪುಗೊಳ್ಳುತ್ತದೆ.

## ಪಾಪ ಪರಿಹಾರ

ಕ್ರೈಸ್ತ ಧಾರ್ಮಿಕ ಸಾಧನೆಯಲ್ಲಿ ಪತನಗೊಳ್ಳುವುದನ್ನೇ ಮರ್ತ್ಯಪಾಪ (mortal sin) ಎಂದು ಕರೆಯುತ್ತೇವೆ. ದೇವರ ಆಜ್ಞೆಗಳನ್ನು ಮೀರುವುದೇ **ಪಾಪ** ಎನ್ನಿಸಿಕೊಳ್ಳುತ್ತದೆ. ಐತಿಹಾಸಿಕವಾಗಿ ನೋಡುವುದಾದರೆ, ಸಂತ ಅಗಸ್ಟಿನ್ ಮುಂತಾದ ಮಹಾನ್ ಸಂತರು ತಮ್ಮ ಹಿಂದಿನ ಜೀವನದಲ್ಲಿ, ಪಾಪ ಮಾಡಿದ್ದವರೇ. ಅದಕ್ಕಾಗಿ ದುಃಖಪಟ್ಟು, ಪ್ರಾಯಶ್ಚಿತ್ತದ ಮೂಲಕ ಪರಿವರ್ತನೆಗೊಂಡಿದ್ದರಿಂದ, ಅವರು ಆಧ್ಯಾತ್ಮಿಕ ಕ್ಷೇತ್ರದ ಉತ್ತುಂಗ ಸ್ಥಾನಕ್ಕೆ ಏರಲು ಸಾಧ್ಯವಾಯಿತು.

ಕ್ರೈಸ್ತ ಭಕ್ತನ ಆಧ್ಯಾತ್ಮಿಕ ಜೀವನಕ್ಕೆ ಪುಷ್ಟಿ ಮತ್ತು ಶಕ್ತಿ ಸಿಕ್ಕುವುದು **'ಪರಮ ಪ್ರಸಾದ'** ಎಂಬ ಇನ್ನೊಂದು ಸಂಸ್ಕಾರದಿಂದ. ಯೇಸುಕ್ರಿಸ್ತರು ತಮ್ಮ ದಿವ್ಯ ಶರೀರ ಮತ್ತು ರಕ್ತವನ್ನೇ ನಮಗೆ ಪ್ರದಾನ ಮಾಡಿದ್ದಾರೆಂಬ ನಂಬಿಕೆ ಇದರಲ್ಲಿದೆ (ಅದನ್ನು ಬ್ರೆಡ್ ಮತ್ತು ವೈನ್‌ಗಳ ಸ್ವೀಕಾರದಿಂದ ಸಾಂಕೇತಿಕವಾಗಿ ಭಾವಿಸಲಾಗುವುದು). ತಮ್ಮ ಕಟ್ಟಕಡೆಯ ಭೋಜನದ (Last Supper) ಸಮಯದಲ್ಲಿ, ಯೇಸುಕ್ರಿಸ್ತರೇ ಈ ಬಗೆಯ ಸಂಸ್ಕಾರದ ಪದ್ಧತಿಯನ್ನು ಸಂಸ್ಥಾಪಿಸಿದರು ಮಾತ್ರವಲ್ಲ, ತಮ್ಮ ಆಪ್ತ ಸಂದೇಶ ವಾಹಕರನ್ನು (Apostles) 'ಪುರೋಹಿತ' ರನ್ನಾಗಿ (priest) ನಿಯಮಿಸಿದರು. ಆ ಮೂಲಕ ಜಗತ್ತಿನ ಎಲ್ಲೆಡೆ, ಪ್ರಾರ್ಥನಾ ಸಭೆಗಳಲ್ಲಿ, ಪ್ರತಿ ಬಲಿಪೀಠದ ಮೇಲೂ ಯೇಸುಕ್ರಿಸ್ತರು ಶಿಲುಬೆಗೆ ಏರಿದುದನ್ನು ಸಾಂಕೇತಿಕವಾಗಿ, ಈ ಸಂಸ್ಕಾರದ ಮೂಲಕ, ಪುನರಾವರ್ತಿಸುವ ಅಧಿಕಾರವನ್ನು ಅವರಿಗೆ ನೀಡಲಾಗಿದೆ. ಈಗ ತಮ್ಮ ಜೀವನವನ್ನು ದೇವರಲ್ಲಿ ಸಮರ್ಪಿಸಿದ ಎಲ್ಲ ಕ್ರೈಸ್ತ ಪುರೋಹಿತರೂ ಯೇಸುವು ಸಂದೇಶವಾಹಕರಿಗೆ ವಹಿಸಿದ ಈ ಪವಿತ್ರ ಕಾರ್ಯವನ್ನು ನೆರವೇರಿಸುತ್ತಾರೆ. ಶತಶತಮಾನ ಗಳಿಂದ ವಿಶ್ವಾಸಿಗಳಾದ ಭಕ್ತರು 'ಮಹಾಪ್ರಸಾದ' ವೆಂಬ ಈ ದಿವ್ಯ ಸಂಸ್ಕಾರದ ಮೂಲಕ ಧೈರ್ಯ ಸ್ಥೈರ್ಯಗಳನ್ನೂ ಸಾಂತ್ವನವನ್ನೂ ಪಡೆದುಕೊಳ್ಳುತ್ತಿದ್ದಾರೆ. ಆ ಮೂಲಕ ತಮ್ಮ ದಿನನಿತ್ಯದ ಜೀವನ ಜಂಜಾಟಗಳ ಮಧ್ಯದಲ್ಲಿಯೂ ಆಧ್ಯಾತ್ಮಿಕ ಭಾವನೆಯನ್ನು ಜೀವಂತ ವಾಗಿರಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದುತ್ತಿದ್ದಾರೆ.

## ಧರ್ಮಪ್ರಚಾರ ಆಧ್ಯಾತ್ಮಿಕತೆ (Missionary Spirituality)

"ವಿಶ್ವದೆಲ್ಲೆಡೆ ಹೋಗಿ, ಜಗತ್ತಿಗೆಲ್ಲ ಶುಭ ಸಂದೇಶವನ್ನು ಬೋಧಿಸಿರಿ. ಸಕಲ ದೇಶಗಳ ಜನರನ್ನು ನನ್ನ ಶಿಷ್ಯರನ್ನಾಗಿ ಮಾಡಿರಿ. ಪಿತ, ಸುತ ಮತ್ತು ಪವಿತ್ರಾತ್ಮರ ಹೆಸರಿನಲ್ಲಿ ಅವರಿಗೆಲ್ಲ ದೀಕ್ಷಾಸ್ನಾನ ಮಾಡಿಸಿರಿ" – ಎಂಬ ಹೇಳಿಕೆಯ ಮೂಲಕ ಯೇಸುಕ್ರಿಸ್ತರು, ಧರ್ಮಪ್ರಚಾರ ಕಾರ್ಯವನ್ನು ಕೈಗೊಂಡು, ತಮ್ಮ ಸಂದೇಶವನ್ನು ಹರಡುವಂತೆ ತಮ್ಮ ಶಿಷ್ಯರಿಗೆ ಆಜ್ಞೆ ಇತ್ತಿದ್ದಾರೆ. ಆದರೆ ಕ್ರೈಸ್ತ ಅಧ್ಯಾತ್ಮವೆಂಬುದು, ಕೇವಲ ಧರ್ಮಪ್ರಚಾರ ಕಾರ್ಯ ಮಾತ್ರವಲ್ಲ. ನಿಜವಾಗಿಯೂ ಕ್ರೈಸ್ತ ಭಕ್ತರು ತಮ್ಮ ವೈಯಕ್ತಿಕ ಮತ್ತು ಸಾಮಾಜಿಕ ಜೀವನದಲ್ಲಿ ಯೇಸುಕ್ರಿಸ್ತರ ಸಾನ್ನಿಧ್ಯವನ್ನು ಅನುಭವಿಸುತ್ತಾರೆ. ಆ ದಿವ್ಯಾನುಭವವನ್ನು ಮನೋವಾಕ್ಕಾಯಗಳಲ್ಲಿ ಎಲ್ಲೆಲ್ಲೂ ಪ್ರಚಾರ ಮಾಡುವುದನ್ನೇ ತಮ್ಮ ಪವಿತ್ರ ಕಾಯಕವನ್ನಾಗಿ ಮಾಡಿಕೊಳ್ಳುತ್ತಾರೆ. ಮಾನವ ಜನಾಂಗವು ಸಾವಿನ ದವಡೆಯಲ್ಲಿದೆ; ಕಾರಿರುಳ ಜೀವನವನ್ನು ನಡೆಸುತ್ತಿದೆ. ಇದರಲ್ಲಿ ಸಿಕ್ಕಿಹಾಕಿಕೊಂಡಿರುವ ಜನರನ್ನು ಅವುಗಳಿಂದ ವಿಮುಕ್ತಿಗೊಳಿಸುವಂತೆ, ಆ ಕಾರ್ಯಕ್ಕಾಗಿ ಯೇಸುವಿನಂತೆ ಸದಾ ಒಳಿತನ್ನೇ ಮಾಡುವಂತೆ, ಒಬ್ಬ ಕ್ರೈಸ್ತ ಭಕ್ತನನ್ನು, ಅವನಲ್ಲಿ ಆಳವಾಗಿ ಬೇರೂರಿರುವ ಯೇಸುಕ್ರಿಸ್ತನ ಬಗೆಗಿನ ಪ್ರೀತಿ ಮತ್ತು ವಿಶ್ವಾಸಗಳು ಪ್ರೇರೇಪಿಸುತ್ತವೆ. ತನ್ನ ಸ್ವಂತ ಜೀವನದಲ್ಲಿ ಬರುವ ಸಂತೋಷ, ದುಃಖ, ಜಯ, ಅಪಜಯ, ಸಾವು, ನೋವು– ಇವುಗಳಿಗೆಲ್ಲ ಒಂದು ನಿಜವಾದ ಅರ್ಥವನ್ನು ಕೊಟ್ಟಿರುವ ಈ ಕ್ರಿಸ್ತಜ್ಯೋತಿಯನ್ನು ಎಲ್ಲರೊಡನೆ ಹಂಚಿಕೊಳ್ಳದೆ ಇರಲು, ಆ ಕ್ರಿಸ್ತಭಕ್ತನಿಗೆ ಸಾಧ್ಯವಾಗದೆ ಇರದು. ಈ ಬಗೆಯ ಬಯಕೆ ಸ್ವಾರ್ಥವಲ್ಲ, ಹೆಸರು ಕೀರ್ತಿಗಳಿಗಾಗೂ ಅಲ್ಲ. ಪರರು ನೊಂದು, ಬೆಂದು, ಬಸವಳಿದು ಜೀವಿಸುವುದನ್ನು ಕಂಡು, ಅವರ ಬಾಳಿಗೆ ತಾವು ಕಂಡುಕೊಂಡ 'ಯೇಸು ಕ್ರಿಸ್ತಾನುಭವದ ಜ್ಯೋತಿ'ಯನ್ನು ಪಸರಿಸಲು ಮಾತ್ರವೇ ನಿಜವಾದ ಕ್ರೈಸ್ತರು, ಧರ್ಮಪ್ರಚಾರ ಕೈಂಕರ್ಯದಲ್ಲಿ ತೊಡಗುತ್ತಾರೆ.

## ಉಪಸಂಹಾರ

ಮೇಲಿನೆಲ್ಲ ವಿಚಾರಗಳನ್ನು ಕೂಲಂಕಷವಾಗಿ ಅವಲೋಕಿಸಿದಾಗ, ಕ್ರೈಸ್ತ ಆಧ್ಯಾತ್ಮಿಕತೆಯೆಂಬುದು ದಿವ್ಯತ್ರಯರಾದ – ಪಿತ, ಸುತ ಮತ್ತು ಪವಿತ್ರಾತ್ಮರಿಂದ ಪ್ರೇರಿತವಾದುದೆಂಬ ಭಾವನೆ ದೃಢವಾಗುತ್ತದೆ. ಕ್ರೈಸ್ತ ವೇದ ಅಥವಾ ಬೈಬಲ್ಲಿನ ಪ್ರಕಾರ, ದೇವರೊಬ್ಬರೇ ಸತ್ಯ, ಅವರೇ ನೈಜ ಪ್ರೀತಿ. ಆದ್ದರಿಂದ ಕ್ರೈಸ್ತ ಧಾರ್ಮಿಕತೆಯ ತಿರುಳು ಆ ದಿವ್ಯ 'ಪ್ರೇಮ' ದ ಮೇಲೆಯೇ ರೂಪುಗೊಂಡು ನಿಂತಿದೆ. ಕ್ರೈಸ್ತ ಆಧ್ಯಾತ್ಮಿಕತೆಯೆಂಬುದು ಏಸುಕ್ರಿಸ್ತನು ಅಮೋಘವಾಗಿ ಪ್ರೀತಿಸಿದ ಆ ಸರ್ವಶಕ್ತ ದೇವರಿಂದಲೇ ಬಂದದ್ದಾಗಿದೆ.

ಸಂತ ಯೊವಾನ್ನರು ತಮ್ಮ ಶುಭ ಸಂದೇಶದಲ್ಲಿ ಹೀಗೆ ಹೇಳುತ್ತಾರೆ: " ದೇವರು ಜಗತ್ತನ್ನು ಎಷ್ಟೊಂದು ಪ್ರೀತಿಸಿದರೆಂದರೆ, ತಮ್ಮ ಏಕೈಕ ಪುತ್ರನನ್ನೇ ಅದರ ಉದ್ಧಾರಕ್ಕಾಗಿ ಧಾರೆಯೆರೆದರು. ಅವರಲ್ಲಿ ವಿಶ್ವಾಸವಿಟ್ಟು ಯಾರೂ ನಾಶವಾಗದೆ, ಎಲ್ಲರೂ ಶಾಶ್ವತ ಜೀವನವನ್ನು ಪಡೆಯಬೇಕೆಂಬುದೇ ದೇವರ ಆಶಯ." (ಯೊವಾನ್ನ,೩:೧೬–೧೭) ಸಂತ ಪೌಲರು ಹೀಗೆ ಹೇಳುತ್ತಾರೆ: "ಈ ನಂಬಿಕೆ ಮತ್ತು ನಿರೀಕ್ಷೆಗಳು ನಮಗಿರುವುದರಿಂದಲೇ ನಮಗೆ ಆಶಾಭಂಗವಾಗುವುದಿಲ್ಲ. ಏಕೆಂದರೆ, ದೇವರ ಕೊಡುಗೆಯಾಗಿರುವ ಪವಿತ್ರಾತ್ಮರ ಮುಖಾಂತರ ದೇವರು ತಮ್ಮ ಪ್ರೀತಿಯನ್ನು ನಮ್ಮ ಹೃದಯಗಳಲ್ಲಿ ಧಾರಾಳವಾಗಿ ಹರಿಸಿದ್ದಾರೆ" (ರೋಮನರಿಗೆ, ೫:೫). **ಹೀಗೆ ಪ್ರೀತಿಯ ಭಾವನೆ ಮತ್ತು ಪವಿತ್ರಾತ್ಮರ ಆಶೀರ್ವಾದಗಳು ಕ್ರೈಸ್ತ ಆಧ್ಯಾತ್ಮಿಕತೆಗೆ ನಿರಂತರವಾಗಿ ಜೀವ ತುಂಬುತ್ತಿರುತ್ತವೆ.** ▪

**(ಮುಂದಿನ ತಿಂಗಳುಗಳಲ್ಲಿ, ಇದೇ ವಿಚಾರದ ಬಗ್ಗೆ ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತ ಸಿದ್ಧಾಂತಗಳ ಅಭಿಪ್ರಾಯಗಳು ಪ್ರಕಟವಾಗಲಿವೆ. ಈ ವಿಚಾರಗಳ ಮೇಲೆ ಓದುಗರು ತಮ್ಮ ಪ್ರಶ್ನೆಗಳನ್ನು ಕೇಳಬಹುದು. ಅವುಗಳಿಗೆ ಉತ್ತರಗಳನ್ನು ಈ ಅಂಕಣದಲ್ಲಿ ಪ್ರಕಟಿಸುತ್ತೇವೆ.– ಸಂ.)**